ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂಗಳ ನ್ಯಾಯಾಲಯ, ಗಂಗಾವತಿ.

**ಸಿ.ಸಿ.ನಂಃ 2123/2023.**

ಫಿರ್ಯಾದಿದಾರರುಃ ಕನಕಗಿರಿ ಪೋಲಿಸ್ ಠಾಣೆ, ಕೊಪ್ಪಳ ಜಿಲ್ಲೆ.

**ಃವಿರುದ್ಧಃ**

ಆರೋಪಿತ ಃ **3)** ಸುರೇಶ ಮಾಲಿ ಪಾಟೀಲ್ ತಂದೆ ಯಮನಗೌಡ,
ವಯಾಃ **39** ವರ್ಷ, ಉಃ ಒಕ್ಕಲುತನ,
ಸಾಃ ಓಬಳಬಂಡಿ, ತಾಃ ಕನಕಗಿರಿ, ಜಿಃ ಕೊಪ್ಪಳ.

## ಆಪಾದನೆ

ನಾನು ಮೇಘಾ ಸೋಮಣ್ಣವರ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಗಂಗಾವತಿ, ಆದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೆಃ

ದಿಃ28-06-2023 ರಂದು ಸಾಯಂಕಾಲ 4-00 ಗಂಟೆ ಸುಮಾರಿಗೆ ಕನಕಗಿರಿ ಪೋಲೀಸ ಠಾಣಾ ವ್ಯಾಪ್ತಿಯ ಮುಸಲಾಪುರ ಗ್ರಾಮದ ಓಬಳಬಂಡಿ ಕ್ರಾಸ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ 3 ನೇ ಆರೋಪಿತನಾದ ನೀನು ಮಟ್ಕಾ ಬುಕ್ಕಿ ಇದ್ದು, ಸಾರ್ವಜನಿಕರಿಗೆ ಉಪದ್ರವನ್ನು(ತೊಂದರೆ) ನೀಡಿ 1 ನೇ ಆರೋಪಿತನು ಸಾರ್ಜನಿಕರಿಂದ ಹಣ ಪಡೆದು ಮಟಕಾ ನಂಬರುಗಳನ್ನು ಬರೆದುಕೊಂಡು ಚೀಟಿಗಳನ್ನು ಬರೆದುಕೊಡುತ್ತಾ ಪಟ್ಟಿ ಮತ್ತು ರೂ.780/- ಹಣವನ್ನು 1 ನೇ ಆರೋಪಿಯಿಂದ ನೀನು ಪಡೆದುಕೊಂಡು ಮಟಕಾ ಜೂಜಾಟದಲ್ಲಿ ತೊಡಗಿದ್ದು, ಈ ಮೂಲಕ 3 ನೇ ಆರೋಪಿಯಾದ ನೀನು ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ 2021 ಕಲಂ 78(3)ರಂತೆ ಹಾಗೂ ಭಾ.ದಂ.ಸಂ. ಕಲಂ 290 ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆಪಾಧನೆ ಇದೆ.

ಸದರಿ ಮೇಲ್ಕಂಡ ಅಪರಾಧಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ ಮತ್ತು ಸದರಿ ಆಪಾದನೆಗಳಿಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

ಆರೋಪಿತನ ಹೇಳಿಕೆ

ಪ್ರಶ್ನೆ 1) ಮೇಲ್ಕಂಡ ಆಪಾದನೆಯನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ-2) ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ/ತರಿಗೆ ಕನ್ನಡ, ಮರಾಠಿ/ ಹಿಂದಿ ಬಾಷೆಯಲ್ಲಿ ಓದಿ ಹೇಳಿ ನಂತರ ಆರೋಪಿ/ಗಳು ನೀಡಿದ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡು ಸರಿಯಾಗಿದೆ ಎಂದು ದೃಢಿಕರಿಸಿದೆ.)

ಆರೋಪಿತನ ಸಹಿಃ<br>ದಿನಾಂಕಃ**31.07.2025**

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ<br>ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಗಂಗಾವತಿ.